# ವಿದ್ಯಾರ್ಥಿಗಳೇ, ಗಮನಿಸಿ



**ಈ** ತಿಂಗಳು ನೀವು ನಿಮ್ಮ ಪರೀಕ್ಷೆಗಳನ್ನು ಎದುರಿಸುತ್ತೀರಿ. ಅದಕ್ಕಾಗಿ ಕೈಗೊಳ್ಳಬೇಕಾದ ಮುಂಜಾಗರೂಕತೆಗಳನ್ನು ಇಲ್ಲಿ ಪಟ್ಟಿಮಾಡಲಾಗಿದೆ. ಅದರಂತೆ ನಡೆದುಕೊಂಡರೆ, ಪರೀಕ್ಷೆಯ ಭಯ ಎಷ್ಟೋ ಕಡಮೆಯಾಗುತ್ತದೆ ಮತ್ತು ನೀವು ಚೆನ್ನಾಗಿ ಅಂಕಗಳನ್ನೂ ಪಡೆಯಬಹುದು.

೧. **ಪರೀಕ್ಷೆಯಲ್ಲಿ ಬರೆಯುವುದು ಹೇಗೆ?** ಇದರ ಮರ್ಮವನ್ನು ನಾವು ಅರಿಯಬೇಕು. ಪ್ರಶ್ನೆಗಳಿಗೆ ಉತ್ತರವನ್ನು, ಕೊಟ್ಟಿರುವ **'ಅಂಕ'**ಕ್ಕೆ ಸರಿಯಾಗಿ ಹೆಚ್ಚು ಕಡಮೆಯಿಲ್ಲದೆ ಬರೆಯಬೇಕು. **'ಕಾಲ'**ದ ಯೋಜನೆಯನ್ನು ಮಾಡಿಕೊಂಡು ಉತ್ತರ ಬರೆಯಬೇಕು. ಹಾಗೂ **'ವಿಷಯ'**ಕ್ಕೆ ತಕ್ಕಂತೆ ಉತ್ತರ ಇರಬೇಕು.

೨. ಪರೀಕ್ಷೆಯಲ್ಲಿ ಬರೆಯುವಾಗ ಸರಿಯಾದ ಮಾಹಿತಿ, ಸರಳ ವಿವರಣೆ, ಆಕರ್ಷಕ ಬರವಣಿಗೆಯ ಶೈಲಿ, ನಿರ್ದುಷ್ಟತೆ, ತರ್ಕಬದ್ಧತೆ, ಸಂಗ್ರಹವಾದ ಬರವಣಿಗೆ – ಇವು ಬಹು ಮುಖ್ಯ. ಪರೀಕ್ಷಕರು ನಿಮ್ಮಲ್ಲಿ ಈ ಕೆಳಗಿನ ಶಕ್ತಿಗಳಿವೆಯೇ ಎಂದು ನೋಡುತ್ತಾರೆ : ೧. **ವಿಷಯ ಸಂಗ್ರಹಣಾ ಸಾಮರ್ಥ್ಯ** ೨. **ವಿಷಯ ವಿಶ್ಲೇಷಣಾ ಸಾಮರ್ಥ್ಯ** ಮತ್ತು ೩. **ವಿಷಯ ವಿವರಣಾ ಸಾಮರ್ಥ್ಯ**. ಈ ಸಾಮರ್ಥ್ಯಗಳನ್ನು ಸಾಧ್ಯವಾದಷ್ಟು ರೂಢಿಸಿಕೊಳ್ಳಲು ಪ್ರಯತ್ನಿಸಿ.

೩. ಪರೀಕ್ಷೆಯಲ್ಲಿ ನೀವು ಎಷ್ಟು ಪುಟಗಳನ್ನು ಬರೆಯುತ್ತೀರಿ ಎನ್ನುವುದು ಮುಖ್ಯವಲ್ಲ. ಹೇಗೆ ಬರೆಯುತ್ತೀರಿ ಎನ್ನುವುದು ಮುಖ್ಯ. ಹಾಗೆಯೇ ಅಂದವಾದ ಬರವಣಿಗೆ, ಅಚ್ಚುಕಟ್ಟುತನಗಳ ಬಗ್ಗೆ ಗಮನ ಕೊಡಿ.

೪. ಪರೀಕ್ಷೆಯ ಹಿಂದಿನ ದಿನದಂದು ೧–೨ ಗಂಟೆಗಳ ಕಾಲ ಮತ್ತು ಪರೀಕ್ಷೆಯ ದಿನದಂದು ೧–೨ ಗಂಟೆಗಳ ಕಾಲ ಮುಖ್ಯಾಂಶಗಳನ್ನು ಓದಿಕೊಳ್ಳಿ. ಆಗ ನೀವು ಬರೆದುಕೊಂಡ ಟಿಪ್ಪಣಿಗಳನ್ನು ಒಮ್ಮೆ ನೋಡಿಕೊಂಡರೆ ಸಾಕು. ಮುಖ್ಯವಾದ ಸೂತ್ರಗಳು, ಚಿತ್ರಗಳು, ಕ್ಲಿಷ್ಟ ವಿಷಯಗಳಿಗೆ ಹೆಚ್ಚು ಗಮನ ಕೊಡಬೇಕು. ಹಿಂದಿನ ದಿನ ರಾತ್ರಿ ಯಾವುದೇ ಒತ್ತಡ ಮಾಡಿಕೊಳ್ಳದೆ, ಸಮಾಧಾನದಿಂದ ನಿದ್ದೆ ಮಾಡಿ.

೫. ಪರೀಕ್ಷೆಯ ದಿನ ನೀವು ಮಾಡಬೇಕಾದ ಬಹು ಮುಖ್ಯ ಸಂಗತಿಯೆಂದರೆ, ಪರೀಕ್ಷೆಗೆ ಕೊಂಡೊಯ್ಯಬೇಕಾದ ಪೆನ್, ಹಾಲ್ ಟಿಕೆಟ್ ಮೊದಲಾದ ಅವಶ್ಯಕ ಸಂಗತಿಗಳನ್ನು ಮರೆಯದೆ ಜೋಡಿಸಿಟ್ಟುಕೊಳ್ಳುವುದು. ಪರೀಕ್ಷೆಗೆ ಹೊರಡುವ ಮುನ್ನ ದೇವರಿಗೆ ಮತ್ತು ತಂದೆತಾಯಿ ಮುಂತಾದ ಹಿರಿಯರಿಗೆ ನಮಸ್ಕಾರ ಮಾಡಿ, ಅವರ ಆಶೀರ್ವಾದವನ್ನು ಪಡೆಯಿರಿ.

೬. ಯಾವ ಕಾರಣಕ್ಕೂ ಪರೀಕ್ಷಾ ಕೇಂದ್ರಕ್ಕೆ ನೋಟ್ಸ್ ಅಥವಾ ಪುಸ್ತಕಗಳನ್ನು ತೆಗೆದುಕೊಂಡು ಹೋಗಬೇಡಿ. ಪರೀಕ್ಷಾ ಕೇಂದ್ರಕ್ಕೆ ಅರ್ಧ ಗಂಟೆ ಮುಂಚೆಯೇ ಹೋಗಿ ನೀವು ಕುಳಿತುಕೊಳ್ಳಬೇಕಾದ ಜಾಗವನ್ನು ನೋಡಿಕೊಳ್ಳಿ. ನಿಮ್ಮ ಸ್ನೇಹಿತರೊಡನೆ ಆ ಅಂತಿಮ ಗಳಿಗೆಯಲ್ಲಿ ಪಠ್ಯ ವಿಷಯದ ಬಗ್ಗೆ ಚರ್ಚಿಸಲು ಹೋಗದೆ, ಬರೀ ಸ್ನೇಹದ ಮಾತುಗಳನ್ನು ಆಡಿರಿ.

೭. ಪರೀಕ್ಷೆಯ ಗಳಿಗೆಯಲ್ಲಿ ಶಾಂತವಾಗಿರುವುದು ಮುಖ್ಯ. ಅದಕ್ಕೆ ಈ ಕೆಳಗಿನ ಕೆಲವು ಸಲಹೆಗಳನ್ನು ಪಾಲಿಸಿರಿ: ೧. ಪ್ರಶ್ನೆಪತ್ರಿಕೆಯ ಮೇಲಿರುವ ಸೂಚನೆಗಳನ್ನು ತಪ್ಪದೆ ಓದಿ ಅರ್ಥಮಾಡಿಕೊಳ್ಳಿ. ಮೊದಲ ಹತ್ತು ನಿಮಿಷಗಳ ಕಾಲ ಪ್ರಶ್ನೆಪತ್ರಿಕೆಯನ್ನು ಪೂರ್ತಿಯಾಗಿ ಓದಿಕೊಳ್ಳಿ. ೨. ಕಳವಳವಾದರೆ, ದೀರ್ಘ ಉಸಿರಾಟ ಮಾಡಿ. ೩. ಮೊದಲು ನಿಮಗೆ ಚೆನ್ನಾಗಿ ಗೊತ್ತಿರುವ ಪ್ರಶ್ನೆಗಳನ್ನು ಗುರುತುಹಾಕಿಕೊಂಡು, ಅವನ್ನು ಮೊದಲು ಬರೆಯಿರಿ. ಗಣಿತ, ವಿಜ್ಞಾನ ವಿಷಯಗಳಲ್ಲಿ ಮಾಡಬೇಕಾಗಿರುವ ಲೆಕ್ಕಾಚಾರಗಳನ್ನು ಕಾಗದದ ಒಂದು ತುದಿಯಲ್ಲಿ ಚೊಕ್ಕವಾಗಿ ಮಾಡಿ. ಚಿತ್ರಗಳನ್ನು ಸಾಧ್ಯವಾದಷ್ಟು ಬೇಗನೆ, ಆದರೆ ಅಂದವಾಗಿ ಬಿಡಿಸಿ. ೪. ಮುಖ್ಯಾಂಶಗಳ ಕೆಳಗೆ ಗೆರೆ ಎಳೆಯುವ ಮೂಲಕ ಪರೀಕ್ಷಕರ ಗಮನಕ್ಕೆ ತನ್ನಿ. ೫. ಪರೀಕ್ಷೆಯ ಪೂರ್ಣ ಸಮಯವನ್ನು ಸದುಪಯೋಗಿಸಿಕೊಳ್ಳಿ. ಕಡೆಯ ಹತ್ತು ಹದಿನೈದು ನಿಮಿಷಗಳಲ್ಲಿ ನಿಮ್ಮ ಉತ್ತರಗಳನ್ನು ಮತ್ತೆ ಪರೀಕ್ಷಿಸಿಕೊಳ್ಳಿ.

೮. ಪರೀಕ್ಷೆಯಲ್ಲಿ ಯಶಸ್ಸು ಗಳಿಸಲು ಬೇಕಾದ ಮೂಲ ಸೂತ್ರಗಳು ಹೀಗಿವೆ: **ಅಧ್ಯಯನ, ಪರಿಶ್ರಮ, ಅಭ್ಯಾಸ, ಆತ್ಮವಿಶ್ವಾಸ** ಮತ್ತು **ನಿರ್ಭಯತೆ.** ಸ್ವಾಮಿ ವಿವೇಕಾನಂದರ ಸಂದೇಶಗಳನ್ನು ಓದಿ ಮನನ ಮಾಡುವುದರ ಮೂಲಕ ಇವುಗಳನ್ನು ನೀವು ಬೆಳೆಸಿಕೊಳ್ಳಬಹುದು.



# ಸ್ವಾಮಿ ವಿವೇಕಾನಂದರು ನಿರೂಪಿಸಿದ
# ನೀತಿಕಥೆಗಳು



ಡಾ. ಕೆ. ಅನಂತರಾಮು

## ಜ್ಞಾನದೀಕ್ಷೆ

**ನ**ಮಗೊಬ್ಬ ಸದ್ಗುರುವಿನ ಮಾರ್ಗದರ್ಶನ ಬೇಕಾಗಿದೆ. ಅವನು ಕೇವಲ ಮಾನವನಾಗಿದ್ದರೆ ಸಾಲದು. ಅವನಲ್ಲಿ ಪ್ರಚಂಡ ಆಧ್ಯಾತ್ಮಿಕ ತರಂಗಗಳು ಹರಿಯುತ್ತಿರಬೇಕು. ನಾವು ಅಂತಹವನನ್ನು ಆಶ್ರಯಿಸಿ ಶಕ್ತಿಯನ್ನು ಪಡೆದುಕೊಳ್ಳಬೇಕು. ಕೆಲವುವೇಳೆ ಅಂತಹ ಸದ್ಗುರುವು ನಮ್ಮ ಕನಸಿನಲ್ಲಿ ಬಂದು ತನ್ನ ಶಕ್ತಿಯನ್ನು ಧಾರೆಯೆರೆದುಬಿಡಬಹುದು. ಗುರುಶಕ್ತಿಯೆಂಬುದು ನಮಗೆ ಹಲವು ವಿಧಗಳಲ್ಲಿ ಒದಗಿಬರುತ್ತದೆ. ಸಾಧಾರಣ ಮನುಷ್ಯರ ಪಾಲಿಗಂತೂ ಅವನು ದೇಹಧಾರಿಯಾಗಿಯೇ ಬರಬೇಕು. ಅವನು ಬರುವವರೆಗೂ ನಾವು ಸಿದ್ಧತೆ ನಡೆಸುತ್ತಿರಬೇಕು.



ಒಮ್ಮೆ ಕ್ರೈಸ್ತಪಾದ್ರಿಯೊಬ್ಬರು ಸ್ವಾಮಿ ವಿವೇಕಾನಂದರನ್ನು ಕುರಿತು, "ನೀವು ಏಸುಕ್ರಿಸ್ತನನ್ನು ನಂಬುತ್ತೀರಾ?" ಎಂದು ಕೇಳಿದರು. ಅದಕ್ಕೆ ಸ್ವಾಮಿ ವಿವೇಕಾನಂದರು, "ಓಹೋ, ಏಕಿಲ್ಲ, ಹೆಚ್ಚು ಗೌರವದಿಂದಲೇ ನಂಬುತ್ತೇನೆ. ಬೈಬಲ್ ಕೂಡ ಓದಿದ್ದೇನೆ. ಅದೊಂದು ಅದ್ಭುತವಾದ ಗ್ರಂಥ" ಎಂದರು. ಆಗ ಪಾದ್ರಿಗಳು, "ಹಾಗಾದರೆ ನೀವು ನಮ್ಮ ಕ್ರೈಸ್ತಮತ ದೀಕ್ಷೆಯನ್ನು ಏತಕ್ಕೆ ಸ್ವೀಕರಿಸಬಾರದು?" ಎಂದು ಮತ್ತೊಂದು ಪ್ರಶ್ನೆಯನ್ನೆಸೆದರು. ಆಗ ವಿವೇಕಾನಂದರು, "ಹೌದೇ, ನಾನು ದೀಕ್ಷೆ ತೆಗೆದುಕೊಳ್ಳಬೇಕೇ? ದೀಕ್ಷೆಯೆಂದರೇನು ಎಂಬುದು ಮೊದಲು ಸ್ಪಷ್ಟವಾಗಬೇಕಲ್ಲಾ, ದೀಕ್ಷೆ ಕೊಡುವವರು ಯಾರು ಎಂಬುದು ತಿಳಿಯಬೇಕಲ್ಲಾ. ಕೆಲವು ಮಂತ್ರಗಳನ್ನು ಉಚ್ಚರಿಸುತ್ತ ನೀರನ್ನು ದೇಹದ ಮೇಲೆ ಎರಚುವುದೋ ಅಥವಾ ನೀರಿನಲ್ಲೇ ನನ್ನನ್ನು ಮುಳುಗಿಸಿಬಿಡುವುದೋ" ಎಂದು ವಿಷಯದ ಆಳಕ್ಕಿಳಿದುಬಿಟ್ಟರು.

ಆಗ ಪಾದ್ರಿಗಳು, "ಹಾಗಾದರೆ, ನಿಮ್ಮ ಅಭಿಪ್ರಾಯದಲ್ಲಿ ದೀಕ್ಷೆ ಎಂದರೇನು ಎಂಬುದನ್ನು ನನಗೆ ತಿಳಿಸಿಕೊಡಿ" ಎಂದು ನಮ್ರತೆಯಿಂದಲೇ ಕೇಳಿದರು.

ಆಗ ವಿವೇಕಾನಂದರು, "ದೀಕ್ಷೆಯೆಂದರೆ ಆಧ್ಯಾತ್ಮಿಕ ಜೀವನದ ಪ್ರತ್ಯಕ್ಷ ಪರಿಚಯ. ನಮಗೆ ನಿಜವಾದ ದೀಕ್ಷೆ ದೊರೆತರೆ, 'ನಾವು ದೇಹವಲ್ಲ, ನಾವು ಆತ್ಮಸ್ವರೂಪಿಗಳು' ಎಂಬುದು ಗೊತ್ತಾಗಿಬಿಡಬೇಕು. ಅಂತಹ ದೀಕ್ಷೆಯನ್ನು ನೀವು ನನಗೆ ಕೊಡುವುದಾದರೆ ಸ್ವೀಕರಿಸುತ್ತೇವೆ. ನಾನು ನಿಮ್ಮಿಂದ ದೀಕ್ಷೆ ಸ್ವೀಕರಿಸಿದ ಬಳಿಕವೂ ನಾನು ಹಿಂದಿನಂತೆಯೇ ಇರುವುದಾದರೆ, 'ಕ್ರಿಸ್ತನ ಹೆಸರಿನಲ್ಲಿ ನಾನು ದೀಕ್ಷೆ ಸ್ವೀಕರಿಸಿದ್ದೇನೆ' ಎಂದು ಹೇಳಿಕೊಳ್ಳುವುದರಿಂದ ಆಗುವ ಪ್ರಯೋಜನವಾದರೂ ಏನು?" ಎಂದು ಪ್ರಶ್ನೆಯೆಸೆಯುತ್ತಲೇ ಉತ್ತರಿಸಿದರು. "ಹೌದು ನಾನು ಕೊಡುತ್ತಿರುವ ಜ್ಞಾನದೀಕ್ಷೆ ನಿಮ್ಮ ಪ್ರಯೋಜನಕ್ಕೆ ಬರುವುದಿಲ್ಲ" ಎಂದು ಹೇಳಿ ಆ ಪಾದ್ರಿಗಳು ಸುಮ್ಮನಾದರು. ವಿವೇಕಾನಂದರ ಚಿಂತನೆಯ ಹಾಸುಬೀಸುಗಳು ಎಷ್ಟು ಶಕ್ತಿಶಾಲಿಯಾಗಿದ್ದವು!

ಕ್ಷಣಮಾತ್ರದಲ್ಲಿ ಮತ್ತೊಬ್ಬರನ್ನು ಮಾರ್ಪಡಿಸಬಲ್ಲ ಶಕ್ತಿಯು ಜೀವಂತವಾಗಿರುವ ಆತ್ಮಜ್ಞಾನಿಗಳಲ್ಲಿ ಮಾತ್ರ ಇರುತ್ತದೆ. ಅಂತಹ ದಿವ್ಯಜ್ಯೋತಿಗಳು ಆಗಾಗ ನಮಗೆ ಗೋಚರಿಸುತ್ತಲೂ ಇರುತ್ತಾರೆ. ಅಂತಹವರ ದರ್ಶನಕ್ಕಾಗಿ ಪ್ರಾರ್ಥಿಸಬೇಕು. ಅವರ ಸನ್ನಿಧಾನವು ಪ್ರಾಪ್ತವಾದರೆ ಅದೇ ನಿಜವಾದ ದೀಕ್ಷೆ. ಕೊನೆಗೆ ಸತ್ಯವನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವ ಸುದಿನವು ಬಂದೇ ಬರುತ್ತದೆ.

## ಗಾಳಿಯಲ್ಲಿ ತೇಲಿದ ಹುಡುಗಿ

ಬಹುಪಾಲು ವಿಜ್ಞಾನಶಾಸ್ತ್ರಗಳು ಚಲಿಸದೆ ಇರುವ ವಸ್ತುವನ್ನು ಕುರಿತು ಅಧ್ಯಯನ ನಡೆಸುತ್ತವೆ. ಆ ಅಧ್ಯಯನವೆಲ್ಲ ಯಾವುದೇ ಜಾತಿಯ ಮರದಿಂದ ಮಾಡಿದ ಒಂದು ಕುರ್ಚಿಯನ್ನೋ ಟೇಬಲ್ಲನ್ನೋ ಅಧ್ಯಯನ ಮಾಡಿದ್ದಕ್ಕೆ ಸಮ. ಏಕೆಂದರೆ ಕುರ್ಚಿಯನ್ನು ಕುರಿತು ಅಧ್ಯಯನ ಮಾಡುವಾಗ ಅದು ತನ್ನಷ್ಟಕ್ಕೆ ಎಲ್ಲಿಗೋ ಹಾರಿಹೋಗುವುದು ಸಾಧ್ಯವಿಲ್ಲ. ನಮ್ಮ ಕಣ್ಣಮುಂದೆಯೇ ಇರುತ್ತದೆಯಾದ್ದರಿಂದ ಅದರ ಅಧ್ಯಯನ ಸುಲಭಸಾಧ್ಯ. ಆದರೆ ಹಾಗೆಯೇ ಮನಸ್ಸನ್ನು ಅಧ್ಯಯನ ಮಾಡೋಣ ಎಂದು ಹೊರಟರೆ, ಅದರಷ್ಟು ಕಠಿಣವಾದ ಕೆಲಸ ಬೇರೊಂದಿಲ್ಲ. ಅದನ್ನು ತಿಳಿದುಕೊಳ್ಳೋಣವೆಂದು ಪ್ರಯತ್ನಿಸುತ್ತಿದ್ದಂತೆಯೇ, ಅದು ನಮ್ಮನ್ನು ತೊರೆದು ಎತ್ತಲೋ